## ಎರಡನೇ ಹೆಚ್ಚುವರಿ ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ, ಸಾಃ ಗೋಕಾಕ

**ಸಿ.ಸಿ. ನಂಬರ 629/2012**

**ದೋಷಾರೋಪಣೆ**

ನಾನು ಶ್ರೀ ಮೋಹನ ಸದಾಶಿವ ಪ್ರೋಳ
ಬಿ.ಎ. ಎಲ್.ಎಲ್.ಬಿ.(ಸ್ಪೇ)
ಎರಡನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು, ಗೋಕಾಕ.

ಆರೋಪಿತರಾದಃ1)ನಾಶೀರುದ್ದೀನ @ನಾಶೀರ ತಂದೆ ಅಬ್ದುಲಮಜೀದ ನಧಾಫ, ಸಾ ಪಾಶ್ಚಾಪೂರ
2) ಮಕ್ತುಮ ಗಫಾರಸಾಬ ದೇಸಾಯಿ, ಸಾಃಗೊಡಚಿನಮಲ್ಕಿ
3) ಮುಸ್ತಾಕಹ್ಮದ ಅಬ್ದುಲರಹೀಮಾನ ಅತ್ತಾರ, ಸಾಃಪಾಶ್ಚಾಪೂರ
4) ಜಾಫರ ನಾಶೀರಹ್ಮದ ನಧಾಫ, ಸಾಃ ಹುಕ್ಕೇರಿ

**ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,**

ದಿಃ 02-02-2012 ರಂದು ಸಂಜೆ 6-00 ಗಂಟೆಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಗೊಡಚಿನಮಲ್ಕಿ ಗ್ರಾಮದ ಹದ್ದಿಯಲ್ಲಿ ಆರೋಪಿತರಾದ ನೀವೆಲ್ಲರೂ ಆರೋಪಿ 5 ಮತ್ತು 6 ಜೊತೆ ಸೇರಿಕೊಂಡು ಗೈರು ಕಾಯ್ದಿಶೀರಮಂಡಳಿಯಾಗಿ ಚಾಸಾ 1 ಹತ್ತಿರ ಇರುವ 3 ಕೆಜಿ ಬಂಗಾರವನ್ನು ಕಳುವು ಮಾಡಲು ಚಾಸಾ 1 ರಿಗೆ ಅಪಹರಣ ಮಾಡುವ ಉದ್ದೇಶದಿಂದ ಅಕ್ರಮಕೂಟ ಏರ್ಪಡಿಸಿಕೊಂಡು ಬಂದು ತಂಟೆ ಮಾಡಿ, ಅಪರಾಧ ಕಲಂ 143 ಸಹ ಕಲಂ 149 ಐಪಿಸಿ ರಡಿ, ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತರಾದ ನೀವು ಅಕ್ರಮಕೂಟ ಏರ್ಪಡಿಸಿಕೊಂಡು ಬಂದು, ಚಾಸಾ 1 ರಿಗೆ ಅಪಹರಣ ಮಾಡುವ ಉದ್ದೇಶದಿಂದ ಬಂದು ದೊಂಬಿ ಗಲಾಟೆ ಮಾಡಿ, ಅಪರಾಧ ಕಲಂ 147 ಸಹ ಕಲಂ 149 ಐಪಿಸಿ ರಡಿ, ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತರಾದ ನೀವು 3 ಕೆಜಿ ಬಂಗಾರವನ್ನು ಕಳುವು ಮಾಡಲು ಚಾಸಾ 1 ರಿಗೆ ಅಪಹರಣ ಮಾಡುವ

ಉದ್ದೇಶದಿಂದ ಲಾಂಗಗಳನ್ನು ಹಿಡಿದುಕೊಂಡು ಕಾರ ಗಾಡಿ ನಂಬರ ಎಂಎಚ್-06-ಎಂ-9571 ಹಾಗೂ ಮೋಟರ ಸೈಕಲ ನಂಬರ ಕೆಎ-49-ಎಚ್-8555 ನೇದ್ದವುಗಳ ಮೇಲೆ ಬಂದು ದೊಂಬಿ ಮಾಡಿ, ಅಪರಾಧ ಕಲಂ 148 ಸಹ ಕಲಂ 149 ಐಪಿಸಿ ರಡಿ, ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತರಾದ ನೀವು ಚಾಸಾ 1 ರವರರ ಹತ್ತಿರ ಇರುವ 3 ಕೆಜಿ ಬಂಗಾರವನ್ನು ಕಳುವು ಮಾಡುವ ಬಗ್ಗೆ ಅಪರಾಧಿಕ ಸಂಚು ಮಾಡಿ ಅಪರಾಧ ಕಲಂ 120(ಬಿ) ಐಪಿಸಿ ಸಹ ಕಲಂ 149 ರಡಿ, ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತರಾದ ನೀವು ಚಾಸಾ 1 ರವರಿಗೆ ಅಪಹರಣ ಮಾಡಲು ಸಂಚು ಹೂಡಿ ಹಾಗೂ ಅಪಹರಣ ಮಾಡಲು ಪ್ರಯತ್ನ ಮಾಡಿ ಅಪರಾಧ ಕಲಂ 365 ಸ/ವಾ 511 ಐಪಿಸಿ ಸಹ ಕಲಂ 149 ರಡಿ, ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

30/10/17

ಸ್ಥಳಃ ಗೋಕಾಕ
ದಿಃ-30-10-2017

2ನೇ ಹೆ.ದಿ.ನ್ಯಾದಂ., ಗೋಕಾಕ.